ದಿ.15-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಶ್ರಿ ಕೆ.ಕೆ.ವಿ. ವಕೀಲರಿಂದ ೩ ರಿಂದ 7 ನೇ ಪ್ರತಿವಾದಿಗಳ ಪರ :_**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ವಿಷಯಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಭೀಮವ್ವ ಮತ್ತು ಅವರ ಮಗ ಹನುಮಂತ ರವರ ಹೆಂಡತಿ ಮತ್ತು ಮಕ್ಕಳು ಕರಡಕಲನಲ್ಲಿ ಇರುತ್ತಾರೆ. ಕರಡಕಲ್ಲಿನಲ್ಲಿ ಯಾರು ಇರುತ್ತಾರೆ ಮತ್ತು ಮಸ್ಕಿಯಲ್ಲಿ ಯಾರು ಇರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಖರೀದಿ ಆಗುವಾಗ ದಾವಾ ಆಸ್ತಿ ಒಟ್ಟು 26 ಎಕರೆ ಇತ್ತು. ಸದರಿ ಜಮೀನು ಹನುಮಪ್ಪನ ಹೆಸರಿನಲ್ಲಿತ್ತು. ಶಿವಶಂಕ್ರಪ್ಪ ತೀರಿಕೊಂಡ ಮೇಲೆ ಆತನ ಹೆಂಡತಿ ಭೀಮವ್ವ ಮನೆಯ ಜವಾಬ್ದರಿ ನೋಡಿಕೊಳ್ಳುತ್ತಿದ್ದಳು. ಹನುಮಪ್ಪನ ಹೆಂಡತಿ ಮತ್ತು ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ಹನುಮಪ್ಪನ ಹೆಂಡತಿ ಮತ್ತು ಮಕ್ಕಳು ಮಸ್ಕಿಯಲ್ಲಿ ಇರುತ್ತಾರೆ ಎಂದರೆ ಸರಿ. ಮಸ್ಕಿಯಲ್ಲಿ ಅವರು ಸುಮಾರು 8-10 ವರ್ಷಗಳಿಂದ ಇರಬಹುದು. ಅವರು ಸುಮಾರು 30 ವರ್ಷಗಳಿಂದ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2. ಖರೀದಿ ಆಗುವ ೩ ತಿಂಗಳು ಮುಂಚೆ ಹನುಮಪ್ಪ, ರಮೇಶ, ಸಾಕ್ಷಿದಾರರಾದ ಬಸಪ್ಪ, ಹನುಮಂತಪ್ಪ ಹಾಗೂ ಮಲ್ಲಿಕಾರ್ಜುನ ಮತ್ತು ಭೀಮವ್ವ ನಮ್ಮ ಮನೆಗೆ ಬಂದಿರುತ್ತಾರೆ. ನಮ್ಮ ಮನೆಯಲ್ಲಿ ಖರೀದಿ ಮಾತುಕತೆ ಆಗಿ ಅವರೊಂದು ರೇಟ್ ಇವರೊಂದು ರೇಟ್ ಹೇಳಿದ ನಂತರ ರೂ.24,000/- ಗಳಿಗೆ ಮಾತುಕತೆ ಆಗಿರುತ್ತದೆ. ಖರೀದಿ ಸಮಯದಲ್ಲಿ ಮಲ್ಲಮ್ಮ ಮತ್ತು ಮಲ್ಲಮ್ಮನ ಮಕ್ಕಳು ಹಾಜರಿರಲಿಲ್ಲ ಎಂದರೆ ಸರಿ. ಖರೀದಿ ಮಾತುಕತೆಯಲ್ಲಿ ಭೀಮವ್ವ ಕೇವಲ ತನ್ನ ಬಾಗದ ಆಸ್ತಿಯನ್ನು ಮಾರಿಸಿದ್ದು ಹನುಮಂತನ ಭಾಗ ಆಸ್ತಿಯನ್ನು ಮಾರಿಸಿಲ್ಲ ಎಂದರೆ ಸರಿಯಲ್ಲ. ಅದು ಭೀಮವ್ವ ಮತ್ತು ಹನುಮಂತನ ಜಂಟಿ ಕುಟುಂಬದ ಆಸ್ತಿ ಎಂದು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮಲ್ಲಮ್ಮ ಮತ್ತು ಮಲ್ಲಮ್ಮನ ಮಕ್ಕಳು ದಾವೆ ಹಾಕಿ ದಾವಾ ಆಸ್ತಿಯಲ್ಲಿ ತಮ್ಮ ಭಾಗವನ್ನು ಕೇಳಿರುವ ವಿಚಾರ ನನಗೆ ಗೊತ್ತಿಲ್ಲ. ಪಾಲು ಡಿಕ್ರಿಯ ಪ್ರಕಾರ ಅವರ ತಮ್ಮ ಹೆಸರನ್ನು ಮೊಟೆಷನ್ ಮಾಡಿಕೊಂಡ ವಿಚಾರ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ 6 ನೇ ಪ್ಯಾರಾದಲ್ಲಿ ಹೇಳಿರುವ ವಿಚಾರ ಸರಿ ಇರುವುದಿಲ್ಲ. ಓ.ಎಸ್.ನಂ.40/1998 ರ ಡಿಕ್ರಿಯ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ವಾದಿಯರು ಈ ಖರೀದಿ ಪತ್ರ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಹನುಮಂತನ ಹೆಂಡತಿ ಮತ್ತು ಮಕ್ಕಳ ಸಮ್ಮತಿ ಇಲ್ಲದೆ ಈ ಖರೀದಿ ಪತ್ರವನ್ನು ಮಾಡಿಸಿಕೊಂಡಿದ್ದರಿಂದ ಸದರಿ ಖರೀದಿ ಪತ್ರ ಇವರ ಪಾಲಿಗೆ ಬಾದಕವಾಗುವುದಿಲ್ಲ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರಕ್ಕೆ ಭೀಮವ್ವಳನ್ನು ಹೊರತು ಪಡಿಸಿ ೩ ರಿಮದ

7 ನೇ ಪ್ರತಿವಾದಿಗಳು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ವಾದಿಯರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರಿ ವಿ.ಜೆ.ಕೆ ವಕೀಲರಿಂದ 1 ಮತ್ತು 2 ನೇ ಪ್ರತಿವಾದಿಗಳ ಪರ ;_**

ಭೀಮವ್ವಳ ಜೊತೆ 2 ನೇ ಪ್ರತಿವಾದಿ ವಾಸ ಮಾಡುತ್ತಿದ್ದಾಳೆ ಎಂದರೆ ಸರಿ. ಹನುಮಂತ ಮತ್ತು ಆತನ ಹೆಂಡತಿಗೆ ಹೊಂದಾಣಿಕೆ ಇರಲಿಲ್ಲ ಎಂದರೆ ಸರಿಯಲ್ಲ. ಈ ಖರಿದಿ ಪತ್ರ ಸುಮಾರು 30 ವರ್ಷಗಳ ಹಿಂದೆ ಆಗಿರಬಹುದು. ಆ ಸಮಯದಲ್ಲಿ ಹನುಮಂತನಿಗೆ ಲಗ್ನ ಆಗಿತ್ತು. ಖರೀದಿ ಮಾತುಕತೆಗೆ ಹನುಮಂತನ ಹೆಂಡತಿಯನ್ನು ಕರೆಸಿರುವುದಿಲ್ಲ. ಹನುಮಂತನು ಕುಡಿಯುವ ಮತ್ತು ಜೂಜಾಡುವ ಚಟ ಇತ್ತು ಎಂದರೆ ನನಗೆ ಗೊತ್ತಿಲ್ಲ. ಭೀಮವ್ವ ಮತ್ತು ಸಿದ್ದವ್ವ ಜೊತೆಗೆ ವಾಸ ಮಾಡುತ್ತಿದ್ದು ಹನುಮಂತ ಬೇರೆ ವಾಸ ಮಾಡುತ್ತಿದ್ದ ಎಂದರೆ ಸರಿಯಲ್ಲ. ಖರೀದಿ ಮಾತುಕತೆ ಆದ 3 ತಿಂಗಳ ನಂತರ ನೊಂದಣಿ ಆಗಿರುತ್ತದೆ. ನೊಂದಣಿ ಮಾಡಿಸಲು ಭೀಮವ್ವ, ಹನುಮಪ್ಪ, ಬಸಪ್ಪ ಮತ್ತು ನಾವು ನೊಂದಣಿ ಕಚೇರಿಗೆ ಹೋಗಿರುತ್ತೇವೆ. ರೂ.24,000/- ಅವರು ನೊಂದಣಿ ಕಚೇರಿಯಲ್ಲಿ ಭೀಮವ್ವ ಮತ್ತು ಹನುಮಂತನಿಗೆ ಕೊಟ್ಟಿರುತ್ತಾರೆ. ಖರಿದಿ ಪತ್ರದಲ್ಲಿ ಈ ಮುಂಚೆ ರೂ.24,000/- ನಿಮಗೆ ಮುಟ್ಟಿಸಿರುತ್ತೇವೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯು ನೊಂದಣಿ ಕಚೇರಿಗೆ ಹೋಗುವ ಮುಂಚೆ ಹಣ ಕೊಟ್ಟಿರುತ್ತಾರೆ ಎನ್ನುತ್ತಾರೆ. ಖರಿದಿ ಪತ್ರ ಯಾವ ದಿನಾಂಕದಂದು ಆಗಿರುತ್ತದೆ ಎಂದು ನನಗೆ ನೆನಪಿಲ್ಲ. ಹನುಮಂತ ತನ್ನ ದುಶ್ಚಗಳಿಗೆ ಈ ಹೊಲ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಭೀಮವ್ವಳಿಗೆ ಯಾವುದೇ ಹಣಕಾಸಿನ ಅಡಚಣೆ ಇರಲಿಲ್ಲ ಎಂದರೆ ಸರಿಯಲ್ಲ. ಹನುಮಂತನ ಮಕ್ಕಳು ಕೇಸು ಹಾಕಿದ ಬಗ್ಗೆ ನನಗೆ ಗೊತ್ತಿಲ್ಲ. ಈಗ ದಾವಾ ಆಸ್ತಿಯಲ್ಲಿ ಯಾವು ಕಬ್ಜಾದಲ್ಲಿರುತ್ತಾರೆ ಎಂದರೆ ವಾದಿಯರು ಕಬ್ಜಾದಲ್ಲಿರುತ್ತಾರೆ ಎನ್ನುತ್ತಾರೆ. ದಾವಾ ಆಸ್ತಿ ಸುಮಾರು 26 ಎಕರೆ ಇರುತ್ತದೆ. ಅದು ಈಗ ಎಷ್ಟು ಜನರ ಹೆಸರಿನಲ್ಲಿ ಪಹಣಿ ಆಗಿದೆ ಎಂದು ನನಗೆ ಗೊತ್ತಿಲ್ಲ. ಹನುಮಂತನ ಮಕ್ಕಳು ದಾವೆ ಹಾಕಿದ ಪ್ರಕಾರ ಪಾಲು ಡಿಕ್ರಿಯ ಪ್ರಕಾರ ಭೀಮವ್ವ ಮತ್ತು ಸಿದ್ದವ್ವ ಕಬ್ಜಾದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ವಾದಿಯರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.